ಬಿಜಾಪುರ, ಚಿಕ್ಕಮಗಳೂರು, ಹಾಸನ, ಮೈಸೂರು, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ತಲಾ ಒಂದು ಸಾವು ಸಂಭವಿಸಿರುತ್ತದೆ.

ಉ) ಮಲೇರಿಯ ರೋಗವನ್ನು ಶಾಶ್ವತವಾಗಿ ತಡೆಗಟ್ಟುವುದು ಕಷ್ಟ ಸಾಧ್ಯ. ಇದನ್ನು ಮನಗಂಡು, ಭಾರತ ಸರ್ಕಾರವು "ಮಲೇರಿಯ ನಿರ್ಮೂಲನಾ ಕಾರ್ಯಕ್ರಮವನ್ನು "ಮಲೇರಿಯ ವಿರೋಧ ಕಾರ್ಯಕ್ರಮ" ವೆಂದು ಪುನರ್ನಾಮಕರಣ ಮಾಡಿ ಅದರಂತೆ ಮಲೇರಿಯ ಕ್ರಿಯಾ ಯೋಜನೆ-95 ಎಂಬ ಹೊಸ ಮಾರ್ಗದರ್ಶಿಯನ್ನು ಹೊರಡಿಸಿದ್ದು, ಇದರ ಉದ್ದೇಶವು ಮಲೇರಿಯಾ ರೋಗದಿಂದ ಸಾವು ಸಂಭವಿಸದಂತೆ ಕ್ರಮಕ್ಕೈಗೊಳ್ಳುವುದು ಹಾಗೂ ಮಲೇರಿಯ ರೋಗವನ್ನು ಹೆಚ್ಚಿನ ಆಘಾತಕ್ಕೆ ಎಡೆಗೊಡದಂತೆ ನಿಯಂತ್ರಣದಲ್ಲಿರುವುದೇ ಆಗಿದೆ.

ಬಸವನ ಬಾಗೇವಾಡಿ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಪೈಪ್‌ಲೈನ್

4590 - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯ ಮತಕ್ಷೇತ್ರದ ಮತ್ಯಾಳ, ತೆಲಗಿ, ಮಸುತಿ, ತಲೆವಾಡ ಮನಗೊಳಿ, ಬಿಸನಾಳ 2) ಗರಸಂಗಿ-ರೊಣಿಹಾಳ್-ಮುಳನಾಡ್-ಹೊನಗನ ಹಳ್ಳಸದನಹಳ್ಳಿ ಮತ್ತು ಲೋಣಶಾಳ 3) ಮಮದಾಪುರ-ಸೇಗುಣಸಿ- ಕಾಖಂಡಕಿ 4) ಚಿಂಗಲಗತ್ತಿ-ಗುಣದಾಳ-ಬೋಳಚಕ್ಕಲಗಿ ಕಾತ್ತಾಳ, ನಂದ್ಯಾಳ ಮುಂತಾದ ಗ್ರಾಮಗಳಿಗೆ ಕೃಷ್ಣಾ ನದಿಯಿಂದ ಕುಡಿಯುವ ನೀರಿನ ಪೈಪ್ ಲೈನ್ ಹಾಕುವ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿವೆಯೇ?*

ಆ. *ಹಾಗಿದ್ದಲ್ಲಿ, ಈ ಯೋಜನೆಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?*

ಶ್ರೀ ಎಂ. ದಿವಾಕರಬಾಬು (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು) :

ಅ. ಬಿಜಾಪುರ ಪಟ್ಟಣದ ನೀರು ಸರಬರಾಜು ಯೋಜನೆಯಿಂದ ಗರಸಂಗಿ ಗ್ರಾಮಕ್ಕೆ ನೀರು ಪೂರೈಕೆ ಮಾಡುವ ಪ್ರಸ್ತಾವನೆಯು ತಾಂತ್ರಿಕ ಪರಿಶೀಲನೆಯಲ್ಲಿದೆ.

ಆ. ಮೇಲ್ಕಂಡ ಪ್ರಸ್ತಾವನೆಯು ತಾಂತ್ರಿಕ ಆರ್ಥಿಕವಾಗಿ ಕಾರ್ಯಸಾಧ್ಯವೆಂದು ಕಂಡು ಬಂದಲ್ಲಿ ಅನುದಾನ ಲಭ್ಯತೆಗನುಗುಣವಾಗಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಕೊರತೆ ಇರುವ ಪ್ರಾಥಮಿಕ ಶಾಲಾ ಕೊಠಡಿಗಳು

4591- ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಕೊರತೆಯಿರುವ ಪ್ರಾಥಮಿಕ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು?*